ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ **22-02-2025**

ಮುಂದುವರೆದ ಪಾಟಿ ಸವಾಲುಃ ಶ್ರೀ. ಎನ್.ಎಸ್.ಕೆ ವಕೀಲಂರಿಂದ **1**ನೇ ಪ್ರತಿವಾದಿಯ ಪರಃ-

ದಿಃ**01-11-2023** ರಂದು ನನ್ನ, ನನ್ನ ಮಗ ಮತ್ತು ನನ್ನ ಅಣ್ಣನ ಮೇಲೆ ತಲೆಗೆಟ್ಟಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು ಎಂದರೆ ಸರಿ. ಆ ದೂರನ್ನು **1**ನೇ ಪ್ರತಿವಾದಿ ಕೊಟ್ಟಿರುತ್ತಾರೆ. ಬ್ಯಾಂಕಿನಿಂದ ಬೆಳೆ ಸಾಲ ಮಂಜೂರಾಗಿದ್ದು ಅದಕ್ಕೆ ಒಂದು ಸಹಿ ಮಾಡಿ ಎಂದು ಕೇಳಿದೆವು, ಆ ಬಗ್ಗೆ ಅವರನ್ನು ಕೇಳಿದಾಗ ಅವರು ದೂರು ಕೊಟ್ಟಿರುತ್ತಾರೆ. ಆ ಸಮಯದಲ್ಲಿ **1**ನೇ ಪ್ರತಿವಾದಿ ಹೆಸರಿನಲ್ಲಿ ಯಾವುದೇ ಆಸ್ತಿ ಇರಲಿಲ್ಲ. **1**ನೇ ಪ್ರತಿವಾದಿಯ ಭಾಗವನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಸಹಿ ಮಾಡಿಸಿಕೊಳ್ಳಲು ಹೋಗಿರುತ್ತೇವೆ ಎಂದರೆ ಸರಿಯಲ್ಲ. ಆಕೆ ಸಹಿ ಮಾಡಲಿಲ್ಲ ಎಂದು ಆಕೆಯ ಮೇಲೆ ದೌರ್ಜನ್ಯ ಮಾಡಿದೆವು ಆ ಕಾರಣದಿಂದ ಅವರು ದೂರು ಕೊಟ್ಟರು ಎಂದರೆ ಸರಿಯಲ್ಲ. ನನ್ನ ಗಂಡ ಮರಣ ಹೊಂದಿದ **2** ತಿಂಗಳ ನಂತರ ವಕೀಲರ ನೋಟಿಸನ್ನು **1**ನೇ ಪ್ರತಿವಾದಿ ಕೊಟ್ಟಿದ್ದರು ಎಂದರೆ ಸರಿ. ಭಾಗಾಂಶ ಬೇಕು ಎಂದು ನೋಟಿಸು ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ನೋಟಿಸಿಗೆ ನಮ್ಮ ವಕೀಲರ ಮೂಲಕ ಉತ್ತರ ಕೊಟ್ಟಿರುತ್ತೇವೆ ಎಂದರೆ ಸರಿ.

ಆ ನೋಟಿಸಿನಲ್ಲಿ ಈಗಾಗಲೇ ಭಾಗಾಂಶ ಆಗಿದೆ ಎಂದು ಸುಳ್ಳು ಅಂಶ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. **1**ನೇ ಪ್ರತಿವಾದಿಯು ಉಳಿಕೆ ಆಸ್ತಿಯಲ್ಲಿ ನನಗೆ ಭಾಗಾಂಶ ಬೇಡ ಎಂದು ಯಾವುದೇ ಪತ್ರವನ್ನು ಬರೆದು ಕೊಟ್ಟಿಲ್ಲ. **1**ನೇ ಪ್ರತಿವಾದಿ ಭಾಗಾಂಶ ಬೇಕು ಎಂದು ದಾವೆ ಹೂಡಿಲ್ಲ. ನಾನೇ ಈ ದಾವೆ ಹೂಡಿರುತ್ತೇನೆ. ನನ್ನ ಗಂಡ ಜೀವಂತ ಇದ್ದಾಗ ಸಾಲ ಮಾಡಿಕೊಂಡಿದ್ದ ಬಗ್ಗೆ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಎಲ್ಲಾ ಆಸ್ತಿಗಳ ಮೇಲೆ ಸಾಲ ಮಾಡಲಾಗಿರುತ್ತದೆ. ದಾನ ಪತ್ರದಲ್ಲಿ **1** ಮತ್ತು **2**ನೇ ಪ್ರತಿವಾದಿಗಳ ಸಹಿ ಇಲ್ಲ ಎಂದರೆ ಸರಿ. **1**ನೇ ಪ್ರತಿವಾದಿ ಕೆಲಸಕ್ಕೆ ಸೇರಿದಾಗಿನಿಂದ ಮದುವೆ

ಆಗುವವರೆಗೂ **8** ಲಕ್ಷ ಹಣವನ್ನು ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. **1**ನೇ ಪ್ರತಿವಾದಿ ಪ್ರೀತಿಸಿ ವಿವಾಹ ಮಾಡಿಕೊಂಡ ಕಾರಣ ಆಕೆಯನ್ನು ದೂರ ಇಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾನೇ ನಿಂತು ವಿವಾಹ ಮಾಡಿರುತ್ತೇನೆ ಎಂದು ತಿಳಿಸಿರುತ್ತಾರೆ.

**1**ನೇ ಪ್ರತಿವಾದಿ ಮದುವೆಯಾದ ನಂತರ ಆಕೆ ಸಂಬಳವನ್ನು ನಮಗೆ ಕಳುಹಿಸದ ಕಾರಣ ಆಕೆಯ ಮೇಲೆ ನಾವು ದ್ವೇಷ ಹೊಂದಿರುತ್ತೇವೆ ಎಂದರೆ ಸರಿಯಲ್ಲ. ವಿವಾಹ ಆದ ನಂತರ ನಾವು ಹಣವನ್ನು ಕೇಳುವುದೇ ತಪ್ಪು ಆದ್ದರಿಂದ ನಾವು ಕೇಳಿರುವುದಿಲ್ಲ. ನನಗೆ ಮತ್ತು ಪ್ರತಿವಾದಿಗಳಿಗೆ ದಾವಾ ಆಸ್ತಿಯಲ್ಲಿ ಸಮ ಭಾಗಾಂಶದ ಹಕ್ಕು ಇದೆ ಎಂದರೆ ಸರಿ. **2013** ರಿಂದ **2021** ರವರೆಗೆ ನನ್ನ ಗಂಡ ಕೃಷಿ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದರು ಎಂದರೆ ಸರಿ. ಸದರಿ ಕೃಷಿಗೆ **1**ನೇ ಪ್ರತಿವಾದಿ ಹಣ ಕೊಡುತ್ತಿದ್ದರು ಎಂದರೆ ಸರಿಯಲ್ಲ. ಕೃಷಿಗೆ ಭಂಡವಾಳವನ್ನು **1**ನೇ ಪ್ರತಿವಾದಿ ಹಾಕುತ್ತಿದ್ದರು, ಅದರಿಂದ ಬರುತ್ತಿದ್ದ ಆದಾಯವನ್ನು ನಾವು ಪಡೆಯುತ್ತಿದ್ದೇವು ಆಕೆಗೆ ಏನು ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಈಗಲೂ **3** ಬ್ಯಾಂಕ್ ಗಳಲ್ಲಿ ಚಿನ್ನ ಇದೆ ಎಂದರೆ ಸರಿ. ಅದರಲ್ಲೂ ಸಹ ಭಾಗ ತೆಗೆದುಕೊಳ್ಳಲು ನನ್ನ ತಕರಾರು ಇರುವುದಿಲ್ಲ. ಎಸ್.ಬಿ.ಐ ಬ್ಯಾಂಕಿನಲ್ಲಿದ್ದ ಚಿನ್ನದ ಸಾಲವನ್ನು ಪಾವತಿ ಮಾಡಿದ್ದಾರೆ ಎಂದರೆ ಅದನ್ನು ನನ್ನ ಮಗ ಕಟ್ಟಿರುತ್ತಾರೆ. ಕರ್ನಾಟಕ ಬ್ಯಾಂಕ್, ಸಹಕಾರಿ ಸಂಘದ ಬ್ಯಾಂಕಿಗೆ ಹಣವನ್ನು ನನ್ನ ಮಗ ಕಟ್ಟಿರುತ್ತಾರೆ.

ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಬ್ಯಾಂಕಿನಲ್ಲಿ ಸಾಲ ಪಾವತಿ ಮಾಡಿದಾಗ ಬ್ಯಾಂಕ್ ಮ್ಯಾನೇಜರ್ ಬಳಿ ಚಿನ್ನ ಎಲ್ಲಾ ನನಗೆ ಮಾತ್ರ ಕೊಡಬೇಕು ಎಂದು ಜಗಳ ಮಾಡಿರುತ್ತೇನೇ ಎಂದರೆ ಸರಿಯಲ್ಲ. **1**ನೇ ಪ್ರತಿವಾದಿ ಸಹಿ ಮಾಡಲು ಒಪ್ಪಲಿಲ್ಲ ಎಂದಿರುತ್ತಾರೆ. **1**ನೇ ಪ್ರತಿವಾದಿಯ ಹಠದಿಂದ ಚಿನ್ನ ಬ್ಯಾಂಕಿನಿಂದ ಬಿಡಿಸಿಕೊಳ್ಳಲು ಆಗಿರುವುದಿಲ್ಲ. **3** ಜನ ಮಕ್ಕಳು ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ.

ನನ್ನ ಗಂಡ ಜೀವಂತ ಇದ್ದ ಕಾಲದಲ್ಲಿ ಆಗಿದ್ದ ದಾನ ಪತ್ರವೂ ರದ್ದು ಆಗಬೇಕು ಮತ್ತು **8** ಲಕ್ಷ ಹಣ **1**ನೇ ಪ್ರತಿವಾದಿಗೆ ವಾಪಸ್ಸು ಕೊಡಬೇಕು ದಾನ ಪತ್ರ ನನ್ನ ಗಂಡ ಮಾಡಿರುವುದರಿಂದ ನನಗೆ ಕೊಡಲು ಬರುವುದಿಲ್ಲ ಎಂದಿರುತ್ತಾರೆ.

ಪಾಟಿ ಸವಾಲು ಮುಕ್ತಾಯವಾಯಿತು.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು** ಮಾಡ**ಲಾಗಿದೆ).**

ಸಹಿ/-

**ಓ ಹೇ ಕೇ ಸರಿ ಇದೆ**

**ಪ್ರ ದ ನ್ಯಾ ದಂ ಸೋ ಪೇಟೆ**